ಶ್ರೀ ಕೆ. ಪುಟ್ಟಸ್ವಾಮಿ.—ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರಿಗೆ ಪರ್ಮಿಟ್ ಮಾಡಿದ ಮೇಲೆ ನಮಗೂ ಅವಕಾಶಕೊಡಬೇಕು.

ಶ್ರೀ ಎಸ್. ಗೋಪಾಲಗೌಡ.—ವಿರೋಧಪಕ್ಷದವನಾಗಿದ್ದು ಮತ್ತು ಚುನಾವಣೆ ಕಾಲದಲ್ಲಿ ಆಳುವ ಪಕ್ಷವನ್ನು ವಿರೋಧಿಸಿ ಗೆದ್ದಿರತಕ್ಕ ಯಾವನೇ ಆದರೂ ಅರಿಸಿಬಂದಮೇಲೆ ತನ್ನ ಸ್ವಾಭಿಮಾನಕ್ಕೆ ರಾಜೀನಾಮೆ ಕೊಡದೆ ಆಳುವ ಪಕ್ಷಕ್ಕೆ ಸೇರುವುದು ಪ್ರಗತಿಪರ ಹೆಜ್ಜೆಯಲ್ಲ. ಆಳುವ ಪಕ್ಷವನ್ನು ಬಿಟ್ಟು ವಿರೋಧ ಪಕ್ಷಕ್ಕೆ ಸೇರಿದರೆ ಅದನ್ನು ನಾನು ಪ್ರಗತಿಪರ ಹೆಜ್ಜೆಯೆಂದು ಕರೆದಿದ್ದೇನೆ. ಕಾರಣ ವೇನೆಂದರೆ, ಆಳುವ ಪಕ್ಷದವರು ವಿರೋಧಪಕ್ಷಕ್ಕೆ ಹೋಗುವುದರಲ್ಲಿ ಪ್ರಗತಿಪರ ಹೆಜ್ಜೆ ಇದೆ.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ನಾನು ಬಹಳ ಸವಿನಯದಿಂದ ಏನೂ ಮಾತನಾಡ ಬಾರದೆಂದಿದ್ದೆ, ಮಾನ್ಯ ಶ್ರೀ ಶಿವಪ್ಪನವರಿಗೂ ಮತ್ತು ಈ ಮಾನ್ಯ ಸಭೆಗೂ ಗೊತ್ತಿದೆ. ಪಕ್ಷಾಂತರದ ಬಗ್ಗೆ ಈ ಸಭೆಯಲ್ಲಿ ಚರ್ಚೆಮಾಡಬಾರದೆಂದು ಹೇಳಿರುವುದನ್ನು ಮಾನ್ಯ ಶ್ರೀ ಶಿವಪ್ಪನವರೂ ಸಹ ಹಿಂದೆಯೇ ಒಪ್ಪಿಕೊಂಡಿದ್ದಾರೆ.....

ಶ್ರೀ ಹೆಚ್. ಸಿದ್ದವೀರಪ್ಪ.—ಯಾವಾಗ?

ಶ್ರೀ ವೀರೇಂದ್ರಪಾಟೀಲ್.—ಹಿಂದೆ ಒಪ್ಪಿಕೊಂಡಿದ್ದಾರೆ. ಬೇಕಾದರೆ ನಾನು ರಿಕಾರ್ಡ್ ತೆಗೆದು ತೋರಿಸುತ್ತೇನೆ. ಈ ಕಡೆಯಿಂದ ಆ ಕಡೆ ಹೋಗಲಿ, ಆ ಕಡೆಯಿಂದ ಈ ಕಡೆ ಬರಲಿ ಅದರ ಬಗ್ಗೆ ಚರ್ಚೆಮಾಡುವುದು ಬೇಡ. ಕಾಂಗ್ರೆಸ್ಸಿನಿಂದ ಬಂದರೆ ಪ್ರೊಗ್ರೆಸ್ಸಿವ್, ವಿರೋಧಪಕ್ಷದಿಂದ ಕಾಂಗ್ರೆಸ್ ಪಕ್ಷಕ್ಕೆ ಹೋದರೆ ರಿ-ಆಕ್ಷನರಿ, ರಿಗ್ರೇಡ್ ಎಂದು ಏನು ಹೇಳುವುದೂ ಬೇಡ. ಇದರ ಬಗ್ಗೆ ಬಹುಶಃ 2 ಗಂಟೆ ನಾವೂ ಚರ್ಚೆಮಾಡಬಹುದು. ಈಗ ಈ ವಿಷಯವಾಗಿ ಚರ್ಚೆಮಾಡಬಾರದೆಂಬ ಪ್ರಶ್ನೆ ಇದೆ.

ಶ್ರೀ ಎಸ್. ಗೋಪಾಲಗೌಡ.—ಇಲ್ಲಿ ಮುಖ್ಯ ಮಂತ್ರಿಗಳು ಬುದ್ಧಿವಾದ ಹೇಳುವ ಪ್ರಶ್ನೆ ಇಲ್ಲ. ಆಳುವ ಪಕ್ಷವನ್ನು ಬಿಟ್ಟು ವಿರೋಧಪಕ್ಷಕ್ಕೆ ಬರುವುದು ಪ್ರಗತಿಪರ ಚಿಹ್ನೆ. ಅದರ ವಿರುದ್ಧವಾಗಿ ಆಳುವ ಪಕ್ಷಕ್ಕೆ ಸೇರುವುದು ರಿಗ್ರೇಡ್, ಮುಟ್ಟಾಳ, ಇದನ್ನು ಹೇಳುವುದಕ್ಕೆ ನಮಗೆ ಅಧಿಕಾರವಿದೆ. ಇಷ್ಟು ಮಾತನ್ನು ನಾನು ಹೇಳುತ್ತೇನೆ.

Foreign Tours by two Ministers and the Director of Animal Husbandry

ಶ್ರೀ ಹೆಚ್. ಸಿದ್ದವೀರಪ್ಪ.—ನಾನು ಪೇಪರ್‌ನಲ್ಲಿ ಓದಿದೆ. ಇಬ್ಬರು ಮಂತ್ರಿಗಳು ಪಾಶ್ಚಿಮಾತ್ಯರಿಕ್ಕೆ ಹೋಗುತ್ತಿದ್ದಾರೆಂದು. ಅವರಿಗೆ ಬಾನ್ ವಾಯೇಜ್ ಮಾಡೋಣ ಇದಕ್ಕಾಗಿ ನಮ್ಮ ಸರ್ಕಾರಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೆ ಮತ್ತು ಅವರು ಏತಕ್ಕೋಸ್ಕರ ಹೋಗುತ್ತಾರೆ ಎಂದು ಹೇಳಬೇಕು. ಅವರು ಹೋಗುವುದಾದರೆ, ನಾನು ಒಂದು ಸಲಹೆ ಕೊಡುತ್ತೇನೆ. ಇನ್ನು ಒಂದೆರಡು ತಿಂಗಳುಗಳು ಸುಮ್ಮನಿದ್ದರೆ, ಎಲ್ಲರಿಗೂ ಒಂದು ಚಾನ್ಸ್ ಸಿಗುತ್ತದೆ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವನದುರ್ಗ).—ಈ ತಿಂಗಳು 22ನೇ ತಾರೀಖಿನಲ್ಲಿ ಡೈರೆಕ್ಟರ್ ಆಫ್ ಅನಿಮಲ್ ಹಸ್ಬೆಂಡ್ರಿಯವರು ಫ್ರಾನ್ಸಿಗೆ ಹೋಗುತ್ತಿದ್ದಾರೆ. ಅವರು ಈಗ ಒಂದು ತಿಂಗಳಿನಲ್ಲಿ ರಿಜಿಸ್ಟರ್ ಆಗುವುದರಲ್ಲಿದ್ದಾರೆ. ಅಂತಹವರಿಗೋಸ್ಕರ 10-15 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಪರದೇಶಕ್ಕೆ ಕಳುಹಿಸುತ್ತಿದ್ದಾರೆ. ಅವರು ಅನಿಮಲ್ ಹಸ್ಬೆಂಡ್ರಿ ಶಾಖೆಗೆ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಹೋಗುತ್ತಿದ್ದಾರೆ. ದಯವಿಟ್ಟು ಅದನ್ನು ನಿಲ್ಲಿಸಬೇಕು. ಸರ್ಕಾರದ ದುಡ್ಡನ್ನು ಇಷ್ಟು ಬೇಜವಾಬ್ದಾರಿಯಿಂದ ಖರ್ಚುಮಾಡಬಾರದೆಂಬುದಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆದು ಬಗ್ಗೆ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಸಹ ನಾನು ಕಳುಹಿಸಿದ್ದೆ. ತಾವು ಅದನ್ನು ಅಡ್‌ಮಿಟ್ ಮಾಡಲಿಲ್ಲ. ಹತ್ತೂವರೆ ಗಂಟೆಗೆ ನಾನು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೇನೆ. ತಮ್ಮ ಸೆಕ್ರೆಟೇರಿಯಟ್‌ಗೆ ಅದು ಹನ್ನೆರಡೂವರೆ ಗಂಟೆಗೆ ಮುಟ್ಟಿತು ಎಂದು ಮಾನ್ಯ ಅಧ್ಯಕ್ಷರು ಉತ್ತರ ಕೊಟ್ಟರು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಕಳುಹಿಸಿದಂಥ ಎರಡು ನೋಟೀಸುಗಳನ್ನು ಡಿಸ್ ಅಲೊ ಮಾಡಲಾಗಿದೆ.

Sri H. SIDDAVEERAPPA.—Sir, may I expect an answer from the Leader of the House on the point I have raised ? Since it involves public finances, I would like to know, whether there is any invitation in this behalf or whether there is any commitment on the public funds.

ಶ್ರೀ ಸದಾಶಿವಪ್ಪ ಪಾಟೀಲ್.—ಅದು 10-30ಕ್ಕೆ ಮುಟ್ಟಿತೋ, 12-30 ಕ್ಕೆ ಮುಟ್ಟಿತೋ ಎಂದು ಉತ್ತರ ಕೊಡಬೇಕು.

ಉಪಾಧ್ಯಕ್ಷರು.—ಅದು ಡಿಸ್‌ಅಲೋ ಆಗಿದೆ ಎಂದು ಹೇಳಿದೆ. ಅದಕ್ಕೂ ಉತ್ತರ ಕಳಿಸಿಸುತ್ತದೆ.

Sri VEERENDRA PATIL.—The hon. Member has asked for certain information. It is true that two of our Ministers are going abroad shortly. But I do not know the details whether they are going in delegation or they are going on the invitation of the Governments of the countries. If the hon. Member puts a short notice question I will answer and I do not want to withhold and information. If the Member Straightaway puts a question any expects an answer forthwith from the Government, it is not possible. Therefore, Let him put a short notice question, I am here to answer it.

ಶ್ರೀ ಸದಾಶಿವಪ್ಪ ಪಾಟೀಲ್.—ಸ್ವಾಮಿ, ನನಗೆ ಉತ್ತರ ಬರಲಿಲ್ಲ. ನಾನು ಹತ್ತೂವರೆ ಗಂಟೆಗೆ ಕೊಟ್ಟಿದ್ದೇನೆ.

ಉಪಾಧ್ಯಕ್ಷರು.—ಅದಕ್ಕೂ ಉತ್ತರ ಕೊಡುತ್ತೇವೆ.

Collection of Land Revenue in some Towns in Mysore State

ಶ್ರೀ ಎನ್. ಎ. ಚನ್ನೇಗೌಡ (ಅರಕಲಗೂಡು).—ಸ್ವಾಮಿ, ನಾನು 14ನೇ ತಾರೀಖಿಗೆ ಒಂದು ಕಾಲಿಂಗ್ ಅಟೆನ್‌ಶನ್ ನೋಟೀಸು ಕಳಿಸಿದ್ದೆ. ಪಾಂಡವಪುರ ಮತ್ತು ಇತರ ಕಡೆಗಳಲ್ಲಿ ರೆವೆನ್ಯೂ ಅಧಿಕಾರಿಗಳು ಬಲಾತ್ಕಾರವಾಗಿ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆಂದು ಕಾಲಿಂಗ್ ಅಟೆನ್‌ಶನ್ ನೋಟೀಸು ಕೊಟ್ಟಿದ್ದೆ. ನನಗೆ ನಿಮ್ಮ ಸೆಕ್ರೆಟರಿಯೇಟಿನಿಂದ ಉತ್ತರ ಕೊಟ್ಟಿದ್ದಾರೆ ಅದು ಈ ರೀತಿ ಇದೆ. Since the matter is not of recent occurrence and important, it is not allowed.

ಇವರು ಈ ರೀತಿ ಮಕ್ಕಿಕಾಮಕ್ಕಿ ಬರೆದು ಕಳಿಸಿದರೆ, ಸದಸ್ಯರಿಗೆ ಇರುವ ಹಕ್ಕನ್ನು ಮೊಟಕು ಮಾಡಿದಹಾಗೆ ಆಗುತ್ತದೆ. ಅಧಿಕಾರಿಗಳು ಬಲಾತ್ಕಾರವಾಗಿ ಕಂದಾಯ, ನೀರಿನ ತೆರಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಕಾನೂನು ಪ್ರಕಾರ ತಿಳಿವಳಿಕೆ ನೋಟೀಸ್ ಕೊಡಬೇಕಾಗಿತ್ತು. ಅದು ಕೂಡ ಕೊಟ್ಟಿಲ್ಲ. ಅವರು ಅಲ್ಲಿ ಜನರ ಮನೆಗಳಿಗೆ ನುಗ್ಗಿ, ಪಾತ್ರೆ ಪಾದಾರ್ಥಗಳನ್ನು ಎಲ್ಲಾ ತೆಗೆದುಕೊಂಡು, ಲೂಟಿ ಮಾಡಿಕೊಂಡು ಹೋಗುತ್ತಿದ್ದಾರೆ. ಇದಕ್ಕಿಂತ ಹೆಚ್ಚಿನ ಪಬ್ಲಿಕ್ ಇಂಪೋರ್ಟೆನ್ಸ್ ಏನು ಇರಬೇಕು ? ಇವರು ಹೀಗೆ ಮಕ್ಕಿಕಾಮಕ್ಕಿ ಬರೆದು ನಮ್ಮ ಬಾಯನ್ನು ಮುಚ್ಚಿಸಿದರೆ ನಾವು ಏನು ಮಾಡುವುದು ? ಅದಕ್ಕೆ ತಾವು ಉತ್ತರವನ್ನು ಕೊಡಬೇಕು.

Suspension of a member on 19-8-1969

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, 307 ಪ್ರೊವಿಸೊ ಪ್ರಕಾರ, ನಾನು, ಶ್ರೀಮಾನ್ ನಂಜೇಗೌಡರು ಮತ್ತು ಶ್ರೀಮಾನ್ ಟಿ. ಆರ್. ಶಾಮಣ್ಣನವರು ಸೇರಿ ಒಂದು ನಿರ್ಣಯವನ್ನು ಕಳಿಸಿಕೊಟ್ಟಿದ್ದೇವೆ. ನಿನ್ನೆ ದಿವಸ ಬಿಸಿ ವಾತಾವರಣ ನಡೆದು ಈ ಮನೆಯ ಮಾನ್ಯ ಸದಸ್ಯರಾದಂತಹ ಶ್ರೀ ವಾಟಾಳ್ ನಾಗರಾಜರವರನ್ನು ಈ ಮನೆಯಿಂದ ಈ ಸೆಶನ್ ನಡೆಯುವವರೆಗೆ ಸಸ್ಪೆಂಡ್ ಮಾಡಬೇಕೆಂಬ ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಯವರು ತೆಗೆದುಕೊಂಡು ಬಂದು ಅದನ್ನು ಈ ಸಭೆಯಲ್ಲಿ ವಾಯಿಸ್ ಓಟಿಂದ ಎಸ್ ಎಂದು ಒಪ್ಪಿಕೊಂಡಿತು. ಡಿವಿಜನ್ ಬೇಕೆಂದು ಕೇಳಿದರೂ ಡಿವಿಜನ್ ಆಗಲಿಲ್ಲ.